# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಯವರ ನ್ಯಾಯಾಲಯ, ಟಿ.ನರಸೀಪುರ

**ಸಿಸಿ ನಂಃ 584-23 ಸಿಡಬ್ಲ್ಯೂ- 7 ಪಿಡಬ್ಲ್ಯೂ-3**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಪ್ರಕಾಶ್ |
| ತಂದೆಯ ಹೆಸರು | : | ಪುಟ್ಟರಾಜೇಗೌಡ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಅಬಕಾರಿ ಉಪನಿರೀಕ್ಷಕರು, ಟಿ.ನರಸೀಪುರ ವಲಯ |
| ವಾಸಸ್ಥಳ | : | ಟಿ.ನರಸೀಪುರ |

**ಸಾಕ್ಷಿಗೆ ದಿಃ 13.11.2025 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು 11.03.2022 ರಿಂದ ಇಲ್ಲಿಯವರೆಗೆ ಅಬಕರಿ ಉಪನಿರೀಕ್ಷಕರಾಗಿ ಟಿ.ನರಸೀಪುರ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 14.03.2021 ರಂದು ಬೆಳಿಗ್ಗೆ 09.00 ಗಂಟೆಯಿಂದ ಇಲಾಖಾ ವಾಹನದಲ್ಲಿ ಸಿಬ್ಬಂದಿಗಳಾ ಚಾ,ಸಾ. 3 ಮತ್ತು 4 ರವರೊಂದಿಗೆ ಟಿ.ನರಸೀಪುರ , ಕೊಳ್ಳೆಗಾಲ ಮುಖ್ಯ ರಸ್ತೆಯ ವಾಟಾಲು ಗ್ರಾಮಕ್ಕೆ ಹೋಗುವ ಕೂಡು ರಸ್ತೆಯಲ್ಲಿ ರಸ್ತೆಗಾವಲು ನಡೆಸುತ್ತಿರುವಾಗ ಬೆಳಿಗ್ಗೆ 09.20 ರ ಸಮಯದಲ್ಲಿ ಬರುತ್ತಿದ್ದ ಒಂದು ಬಿಳಿ ಬಣ್ಣದ ಮಹೀಂದ್ರ ಮ್ಯಾಕ್ಸಿಮೋ ವಾಹನವನ್ನು ತಡೆದು ನಿಲ್ಲಿಸಿ ನೋಡಿದಾಗ , ಸದರಿ ವಾಹನದಲ್ಲಿ ಇದ್ದ ವಾಹನದ ಚಾಲಕ ನಮ್ಮನ್ನು ನೋಡಿ ಗಾಬರಿಗೊಂಡಂತೆ ಕಂಡನು. ಸದರಿ ವಾಹನವನ್ನು ಪರಿಶೀಲನೆ ಮಾಡಿದಾಗ ವಾಹನದ ಸಂಖ್ಯೆ ಕೆ ಎ 45-ಎಂ-2426 ಬಿಳಿ ಬಣ್ಣದ ಮಹೀಂದ್ರ ಮ್ಯಾಕ್ಸಿಮೋ ವಾಹನವಾಗಿದ್ದು , ವಾಹನದ ಸೀಟು ಬಳಿ ಮೂರು ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂದಿರುತ್ತದೆ.

ಆರೋಪಿ ಹೆಸರು ಮತ್ತು ವಿಳಾಸ ಕೇಳಲಾಗಿ ಮನು, ಬಿನ್ ಮಹದೇವಯ್ಯ , ಯಾಕನೂರು ಗ್ರಾಮ ಎಂದು ತಿಳಿಸಿರುತ್ತಾರೆ. ಆರೋಪಿಯನ್ನು ಸದರಿ ಮಧ್ಯವನ್ನು ಹೊಂದಲು ಮತ್ತು ಸಾಗಾಣಿಕೆ ಮಾಡಲು ಪರವಾನಗೆ ಇದೆಯೇ ಎಂದು ವಿಚಾರಿಸಲಾಗಿ , ಆತ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

ಸದರಿ ರಟ್ಟಿನ ಬಾಕ್ಸ್ ಗಳನ್ನು ಶೋದನೆ ಮಾಡಲು ಸ್ಥಳದಲ್ಲಿ ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳಾದ ಚಾ,ಸಾ. 1 ಮತ್ತು 2 ರವರಿಗೆ ಪಂಚರಾಗಲು ನೋಟೀಸನ್ನು ನೀಡಿ ಅವರ ಒಪ್ಪಿಗೆಯನ್ನು ಪಡೆದು ಶೋದನಾ ಸಮುಚಿತ ಆಧಾರವನ್ನು ನ್ಯಾಯಾಲಯದಿಂದ ಪಡೆಯಲು ಸಮಯಾವಕಾಶ ಇಲ್ಲದೇ ಇರುವುದರಿಂದ ನಾವುಗಳೇ ಶೋದನಾ ವಾರೆಂಟ್ ನ್ನು ಸ್ಥಳದಲ್ಲೇ ತಯಾರಿಸಿ ರಟ್ಟಿನ ಬಾಕ್ಸ್ ಗಳನ್ನು ತೆಗೆದು ನೋಡಿದಾಗ ಎರಡು ರಟ್ಟಿನ ಬಾಕ್ಸ್ ಗಳ ಮೇಲೆ ರಾಯಲ್ ಚಾಲೆಂಜ್ ಸ್ಟ್ರಾಂಗ್ ಬಿಯರ್ 650 ಮಿಲಿಯ 24 ಬಾಟಲುಗಳು ಕಂಡು ಬಂದಿರುತ್ತದೆ. ಮತ್ತೊಂದು ರಟ್ಟಿನ ಪೆಟ್ಟಿಗೆಯಲ್ಲಿ 500 ಮಿಲಿಯ 24 ಪವರ್ಪುಲ್ ಸ್ಟ್ರಾಂಗ್ ಬಿಯರ್ ಕ್ಯಾನ್ ಗಳು ಕಂಡು ಬಂದಿರುತ್ತದೆ. ನಂತರ ದೊರೆತ ಬಿಯರ್ ನಲ್ಲಿ ಒಂದು ರಟ್ಟಿನ ಬಾಕ್ಸ್ ನಲ್ಲಿದ್ದ 650 ಮಿಲಿಯ 12 ರಾಯಲ್ ಚಾಲೆಂಚ್ ಸ್ಟ್ರಾಂಗ್ ಬಿಯರ್ ಗಳು ಹಾಗೂ ಮತ್ತೊಂದು ಪಟ್ಟಿಗೆಯ 500 ಮಿಲಿಯ ಪವರ್ಪುಲ್ ಸ್ಟ್ರಾಂಗ್ ಬಿಯರ್ ಕ್ಯಾನ್ ಗಳನ್ನು ದೊರೆತ ಪಟೆಟೆಯಲ್ಲೇ ಹಾಕಿ ರಾಸಾಯನಿಕ ಪರೀಕ್ಷಗಾಗಿ ಮಾದರಿಯನ್ನು ತೆಗೆದು ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ , ಇಲಾಖಾ ಸೀಲು 278 ಎಂದು ಸೀಲು ಮಾಡಿ , ಮಾದರಿ ಚೀಟಿಗಳನ್ನು ಅಂಟಿಸಿರುತ್ತೇವೆ. ನಂತರ ಪಂಚನಾಮೆಯನ್ನು ಬೆಳಿಗ್ಗೆ 09.30 ರಿಂದ ಬೆಳಿಗ್ಗೆ 11.00 ಗಂಟೆಯವರಗೆ ಪಂಚನಾಮೆಯನ್ನು ಜರುಗಿಸಿ ದೂರೆತ ಮಧ್ಯವನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ನಂತರ ಠಾಣೆಗೆ ಹೋಗಿ ಆರೋಪಿಗಳ ವಿರುದ್ಧ ಮೊಕದ್ದಮೆ ದಾಖಲಿಸಿರುತ್ತೇನೆ. ನಂತರ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಈ ಸಂಬಂಧ ನಾನು ವರದಿ ಸಲ್ಲಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ಜಪ್ತಿ ಪಡಿಸಿದ ವಾಹನದ ಮಾಲೀಕತ್ವ ಕೋರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು , ಮೈಸೂರು ಪೂರ್ವ ರವರಿಗೆ ದಿಃ 16..03.2023 ರಂದು ಪತ್ರ ವ್ಯವಹಾರ ಮಾಡಿರುತ್ತೇನೆ.

ಮಾದರಿಯನ್ನು ದಿಃ 18.03.2023 ರಂದು ಚಾ,ಸಾ. 4 ರವರಿಗೆ ವರದಿಯನ್ನು ಹಾಜರುಪಡಿಸುವಂತೆ ಸೂಚನೆ ನೀಡಿರುತ್ತೇನೆ. ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾ.ಸಾ. 8 ರವರಿಗೆ ಹಸ್ತಾಂತರಿಸಿರುತ್ತೇನೆ. ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನಿಪಿ 1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ 1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಶೋಧನಾ ಸಮುಚಿತ ಆಧಾರವನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ 7, ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಲಿಸ್ಟ ಆಫ ಆರ್ಟಿಕಲ್ಸ್ ನೋಡಿ ಗುರುತಿಸಿದ್ದು , ಅದನ್ನು ನಿಪಿ 8, ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿವೇದನೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು.

ದಿಃ 17.03.2023 ರಂದು ಎಫ್ ಎಸ್ ಎಲ್ ರವರಿಗೆ ಬರೆದ ಪತ್ರ ವನ್ನು ನಿಪಿ 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಯಿತು. ದಿಃ 16.03.2023 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸಲ್ಲಿಸಿದ ಮನವಿ ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ 12, ಮತ್ತು ಸಾಕ್ಷಿಯ ಸಹಿಯನ್ನು ನಿಪಿ 12(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 500 ಮಿಲಿಯ 24 ಪವರ್ಫುಲ್ ಸ್ಟ್ರಾಂಗ್ ಬಿಯರ್ 24 ಕ್ಯಾನ್ ಗಳು , ರಾಯಲ್ ಚಾಲೆಂಜ್ ಸ್ಟ್ರಾಂಗ್ ಬಿಯರ್ 12 ಬಾಟಲುಗಳು, ಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಒಟ್ಟಾಗಿ ಮು.ಮಾ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ .ಆರ್ .ಸಿ. ವಕೀಲರಿಂದಃ**

ಘಟನಾ ಸ್ಥಳದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಆರೋಪಿಯು ಇರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಪೋಟೋ ತೆಗೆದಿರುತ್ತೇವೆ. ಸೀರಿಯಲ್ ನಂಬರ್ ಗಳನ್ನು ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ. ಘಟನಾ

ಸ್ಥಳದಲ್ಲಿ ಮುದ್ದೆ ಮಾಲುಗಳನ್ನು ವಶ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತನ್ನು ಕೇಳಿ ಈ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚೆಕ್ಕು ಬಂದಿ ಪೂರ್ವಕ್ಕೆ ಟಿ ನರಸೀಪುರ ಕೊಳ್ಳೆಗಾಲಕ್ಕೆ ಹೋಗುವ ಮುಖ್ಯ ರಸ್ತೆ , ಪಶ್ಚಿಮಕ್ಕೆ ವಾಟಾಲು ಗ್ರಾಮಕ್ಕೆ ಹೋಗುವ ರಸ್ತೆ , ಉತ್ತರಕ್ಕೆ ಮತ್ತು ದಕ್ಷಿಣ ಖಾಲಿ ಜಾಗ ಇರುತ್ತದೆ. ಇಲಾಖಾ ಅಂಕಿ ಅಂಶಕ್ಕೋಸ್ಕರ ಈ ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮುಮಾ 1 ಎಲ್ಲಾ ಮಧ್ಯದ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿಯಲ್ಲ. ಮುಮಾ 1 ಘಟನಾ ಸ್ಥಳದಲ್ಲಿ ದೊರೆತಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಕಛೇರಿಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಮಧ್ಯವನ್ನು ಸಾಗಾಣಿಕೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಶಾಲೆಗೆ ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದು , ಅವರು ಯಾವುದೇ ಮಧ್ಯವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

ಮತ್ತು 2 ಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿಅಂಶಕ್ಕೋಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಮಹಜರ್ ನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿಯೇ ಕುಳಿತು ನಿಪಿ-1 ನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

(ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು ಯಾವುದೇ ಸಕಾರಣವನ್ನು ನೀಡದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ